## ಸುಮನಾ ಯುಗಳ



ಒಳ್ಳೆಯ ಸಂಗತಿಗಳು ಸಾಲು ಸಾಲಾಗಿಯೇ ಸಂಭವಿಸುತ್ತವೆ ಎನ್ನುವುದು ಯುವ ನಿರ್ದೇಶಕಿ ಸುಮನಾ ಕಿತ್ತೂರು ಅವರ ಪಾಲಿಗೆ ನಿಜವಾದಂತಿತ್ತು. 'ಕಳ್ಳರ ಸಂತೆ' ಚಿತ್ರದ ನಿರ್ದೇಶನಕ್ಕಾಗಿ 2009–2010ರ ಸಾಲಿನ 'ತೀರ್ಪುಗಾರರ ವಿಶೇಷ ಪ್ರಶಸ್ತಿ' ಮೊದಲನೆಯ ಒಳ್ಳೆಯ ಸಂಗತಿ. ಈ ಸುದ್ದಿ ಪ್ರಕಟವಾದ ಮಾರನೇ ದಿನವೇ ಅವರ ನಿರ್ದೇಶನದ ಹೊಸ ಚಿತ್ರ 'ಎದೆಗಾರಿಕೆ' ಸೆಟ್ಟೇರಿದ್ದು ಇನ್ನೊಂದು ಸಂಗತಿ. 'ಸ್ಲಂ ಬಾಲ' ಹಾಗೂ 'ಕಳ್ಳರ ಸಂತೆ' ನಂತರ ಸುಮನಾ ನಿರ್ದೇಶಿಸುತ್ತಿರುವ ಮೂರನೇ ಚಿತ್ರವಿದು. ಎಂದಿನಂತೆ ಪತ್ರಕರ್ತ ಅಗ್ನಿ ಶ್ರೀಧರ್ ಅವರ ಕಥೆ, ಚಿತ್ರಕಥೆಯನ್ನು ಆಧರಿಸಿದ ಚಿತ್ರವಿದು. ಶ್ರೀಧರರ ನೀಳ್ಗತೆ 'ಎದೆಗಾರಿಕೆ' ಭೂಗತಲೋಕದ ಕಲ್ಲು ಮನಸ್ಸುಗಳ ನಡುವೆಯೂ ಹುದುಗಿರುವ ಆರ್ದ್ರತೆಯ ಪಸೆಯನ್ನು ವಿಶ್ಲೇಷಿಸುವ ಒಂದು ಅಪರೂಪದ ಪ್ರಯತ್ನ. ಭೂಗತಲೋಕದಲ್ಲಿನ ತಮ್ಮ ಅನುಭವಗಳನ್ನು ಆಧರಿಸಿಯೇ ಶ್ರೀಧರ್ ಈ ಕಥನ ರೂಪಿಸಿದ್ದಾರೆ.

ಕೊಲೆಯನ್ನೇ ವೃತ್ತಿಯನ್ನಾಗಿಸಿಕೊಂಡಿರುವ ವ್ಯಕ್ತಿಯೊಬ್ಬ ತಾನೇ ಕೊಲೆಯಾಗಬೇಕಾದ ಸಂದರ್ಭ ಒದಗಿದಾಗ, ಸಾವಿನ ಸಮ್ಮುಖದಲ್ಲಿ ಅಧೀರನಾಗದೆ ತನ್ನ ವ್ಯಕ್ತಿತ್ವದ ಗಟ್ಟಿತನವನ್ನು ಮೆರೆಯುವ ಕಥೆಯಿದು. ಮಿಕ ಮತ್ತು ಬೇಟೆಗಾರರ ಮುಖಾಮುಖಿಯ ಘಟನೆಗಳು ಬದುಕಿನ ವಿವಿಧ ಸಂಗತಿಗಳಿಗೆ ಕನ್ನಡಿ ಹಿಡಿಯಲು ಪ್ರಯತ್ನಿಸುತ್ತವೆ. 'ಇಂಥ ಅಪರೂಪದ ಕಥೆಯನ್ನು ಸಿನಿಮಾ ಮಾಡಲು ಅವಕಾಶ ದೊರೆತಿರುವುದು ತಮ್ಮ ಅದೃಷ್ಟ' ಎಂದು ಸುಮನಾ ಅವರಿಗನ್ನಿಸಿದೆ. ಅಂದಹಾಗೆ, ಆದಿತ್ಯ ಈ ಚಿತ್ರದ ನಾಯಕ. ಬೆಂಗಳೂರು, ಸಕಲೇಶಪುರ ಮತ್ತು ಮುಂಬಯಿಗಳಲ್ಲಿ 'ಎದೆಗಾರಿಕೆ' ತಂಡ ಚಿತ್ರೀಕರಣ ನಡೆಸುತ್ತಿದೆ.

## ಬರುತ್ತಿದ್ದಾನೆ ವಿಷ್ಣುವರ್ಧನ...

ದ್ವಾರಕೀಶ್ ನಿರ್ಮಾಣದ 'ವಿಷ್ಣುವರ್ಧನ' ಚಿತ್ರ 'ಕನ್ನಡ ಮಾಸ' ನವೆಂಬರ್ 2ನೇ ವಾರದಲ್ಲಿ ತೆರೆ ಕಾಣುವುದು ಖಚಿತವಾಗಿದೆ. ಗೀತೆಗಳೂ ಸೇರಿದಂತೆ ಚಿತ್ರೀಕರಣ ಸಂಪೂರ್ಣ ಮುಗಿಸಿ, ಕೊನೆ ಕ್ಷಣಗಳ ಸಿಂಗಾರದಲ್ಲಿ ಮುಳುಗಿರುವ 'ವಿಷ್ಣುವರ್ಧನ' ಚಿತ್ರದ ಬಗ್ಗೆ ದ್ವಾರಕೀಶ್ ಅವರಿಗೆ ಅಪಾರ ನಿರೀಕ್ಷೆಗಳಿವೆ.

ಸುದೀಪ್ ಅಭಿನಯದ ಚಿತ್ರಗಳು ತೆರೆ ಕಂಡು ಬಹುದಿನಗಳಾಗಿರುವುದರಿಂದ, ಅವರ ಅಭಿಮಾನಿಗಳು ಕೂಡ ಹೊಸ ಚಿತ್ರದ ನಿರೀಕ್ಷೆಯಲ್ಲಿದ್ದಾರೆ. ಈ ನಡುವೆ, ತಮಿಳು, ತೆಲುಗು ಹಾಗೂ ಹಿಂದಿಯ ದೊಡ್ಡ ಚಿತ್ರಗಳು ಇದೇ ಅವಧಿಯಲ್ಲಿ ಬಿಡುಗಡೆಯಾಗುತ್ತಿರುವುದು ದ್ವಾರಕೀಶ್ ಬಳಗದಲ್ಲಿ ಕೊಂಚ ಆತಂಕವನ್ನೂ ಉಂಟುಮಾಡಿದೆ. ಆದರೆ, ತಮ್ಮ ಸಿನಿಮಾ ಚೆನ್ನಾಗಿರುವುದರಿಂದ, ವಿಷ್ಣು ಹಾಗೂ ಸುದೀಪ್ ಅಭಿಮಾನಿಗಳು ಈ ಚಿತ್ರವನ್ನು ಗೆಲ್ಲಿಸುತ್ತಾರೆ ಎನ್ನುವ ನಿರೀಕ್ಷೆ ದ್ವಾರಕೀಶ್ ಅವರದ್ದು.



## ಭಾವನಾ 'ಎದೆಗಾರಿಕೆ'



ಒಂದೆಡೆ ಜನಪದ ಸೊಗಡಿನ ಭಾಗೀರಥಿ, ಇನ್ನೊಂದೆಡೆ ಆಧುನಿಕ ಬದುಕಿಗೆ ತನ್ನನ್ನು ಒಡ್ಡಿಕೊಂಡ ನಗರದ ತರುಣಿ. 'ಚಂದ್ರಮುಖಿ ಕಣ್ಮರೆಯಾದಳು' ಎನ್ನುವಾಗಲೇ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ನಟಿ ಭಾವನಾ.

ಬರಗೂರು ರಾಮಚಂದ್ರಪ್ಪನವರ 'ಭಾಗೀರತಿ' ಚಿತ್ರದಲ್ಲಿ ಭಾವನಾ ಅವರಿಗೆ ಕಥಾನಾಯಕಿಯ ಪಾತ್ರ. ಕನ್ನಡ ಜಾನಪದದ ಅನನ್ಯ ಪಾತ್ರಗಳಲ್ಲಿ ಭಾಗೀರತಿಯೂ ಒಂದು. ಇಂಥ ಪಾತ್ರ ದೊರೆತಿರುವುದು ಭಾವನಾಗೆ ಖುಷಿ ತಂದಿದೆ. ಅಂತೆಯೇ ಸುಮನಾ ಕಿತ್ತೂರರ 'ಎದೆಗಾರಿಕೆ' ಚಿತ್ರದ ಮುಖ್ಯಪಾತ್ರವೂ ಅವರಿಗೆ ಖುಷಿ ತಂದಿದೆ. ನಾಯಕನ ಭೂಗತಲೋಕದ ನಂಟು ಗೊತ್ತಾದ ನಂತರವೂ ಗಟ್ಟಿ ನಿರ್ಧಾರ ಕೈಗೊಳ್ಳುವ ತರುಣಿಯ ಪಾತ್ರವದು. ಈ ಮುನ್ನ ಕೂಡ 'ದೇವೀರಿ', 'ಚಂದ್ರಮುಖಿ ಪ್ರಾಣಸಖಿ', 'ಶಾಂತಿ' ರೀತಿಯ ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ನಟಿಸಿದ್ದರೂ, 'ಎದೆಗಾರಿಕೆ'ಯ ಪಾತ್ರದ ಸೊಗಸು ಬೇರೆ ಬಗೆಯದಾಗಿಯೇ ಭಾವನಾಗೆ ಕಂಡಿದೆ. ಭರತನಾಟ್ಯ ಭಾವನಾ ಅವರ ಆಸಕ್ತಿಯ ಇನ್ನೊಂದು ಕ್ಷೇತ್ರ. ಸಿನಿಮಾದ ಹೊರತಾಗಿ ಭರತನಾಟ್ಯವನ್ನು ಗಂಭೀರವಾಗಿ ಪರಿಗಣಿಸಿರುವ ಅವರಿಗೆ, ನಾಟ್ಯದಲ್ಲಿ ಏನನ್ನಾದರೂ ಸಾಧಿಸುವ ಹಂಬಲ.

■ ರಘು